ಸಮುಚ್ಚಯದಿಂದ ತುಸು ದೂರವಿರುವ ಚೇರ್ಮನ್ನರ ಮನೆ ನಗರದಲ್ಲಿಯೇ ದೊಡ್ಡದಾದುದು. ದೊಡ್ಡ ಕಾಂಪೌಂಡು. ಒಳಗೆ ಮಾವು, ಹಲಸು, ತೆಂಗು ಇತ್ಯಾದಿ ಮರಗಳುಳ್ಳ ಸುಂದರ ತೋಟ. ಮನೆಯ ಚಿಕ್ಕ ಬಾವಿಯಲ್ಲದೇ ತೋಟದ ನಡುವೆ ದೊಡ್ಡದೊಂದು ಬಾವಿ. ಅವರ ಮನೆಯತ್ತ ಮುಖ ಮಾಡಿದ ರಸ್ತೆ ತಕ್ಕಷ್ಟು ನೀಟಾಗಿದೆ. ಪಂಚಾಯತಕ್ಕೆ ಬರುವ ಸರಕಾರೀ ಅನುದಾನವೆಲ್ಲ ಚೇರ್ಮನ್ನರ ಮನೆಯ ಪರಿಸರದಲ್ಲಿಯೇ ವಿನಿಯೋಗವಾಗಿದೆ ಎಂದು ಯಾರಾದರೂ ಅರ್ಥೈಸಿದರೆ ಅದಕ್ಕೆ ಚೇರ್ಮನ್ನರನ್ನು ತೆಗಳಬೇಡಿ. ಯಾಕೆಂದರೆ, ಕಾಯದೆಯ ಪ್ರಕಾರ ಊರಿನಲ್ಲಿ ಚುನಾಯಿತ ಪಂಚಾಯತ ಮಂಡಲಿ ಇದೆ. ಅವರೇನು ಕಡಲೇಕಾಯಿ ತಿಂತಿದಾರಾ? ಅವರನ್ನೇ ಕೇಳಿ ನೋಡಿ. 'ಅಯ್ಯೋ! ನಾವೇನ್ ಮಾಡೋದು? ಅದನ್ನೆಲ್ಲಾ ನೋಡಿಕಳಕೆ ಚೇರ್ಮನ್ರಿಲ್ವಾ?' ಅಂತ ಮರುಪ್ರಶ್ನೆ ಒಗೆದರೆ! ಈ ಜಡಭರತರಿಗೆ ಚೇರ್ಮನ್ನರಿಂದ ಆಗೊಮ್ಮೆ ಈಗೊಮ್ಮೆ ಭಕ್ಷೀಸು ಇದ್ದೇ ಇದೆ. ಮತ್ತೆ! ಠರಾವು ಪುಸ್ತಕದಲ್ಲಿ ಸಹಿ ಹಾಕುವುದೆಂದರೆ ಅದೇನು ಪುಕ್ಕಟೆ ಬರ್ತದಾ?

'ಸ್ವಾಮಿ! ಇದು ನಿಮ್ಮೂರು. ಸ್ಕೂಲ್‌ನ ಉದ್ಧಾರಾ ಮಾಡ್ತೀನಿ ಅಂತ ನೀವು ಮುಂದೆ ಬಂದ್ರೆ ಬ್ಯಾಡಾ ಅನ್ನೋಕೆ ನಾನ್ಯಾರು? ಧಾರಾಳವಾಗಿ ಬನ್ನಿ. ಏನು ಮಾಡ್ಬೇಕಂತಿದೀರೋ ಮಾಡಿ. ಆದರೆ ಅದಕ್ಕೂ ಮೊದ್ಲು ಬೆಟರ್ಮೆಂಟ್ ಕಮೀಟಿ ಚೇರ್ಮನ್ರ ಜೊತೆ ಮಾತಾಡಿ...'

ಇದ್ದಕ್ಕಿದ್ದ ಹಾಗೆ ಊರ ಗ್ರಹಚಾರಕ್ಕೆ ತಿರುವು ಬಂದಿದ್ದು ಮೇಷ್ಟ್ರ ಆಗಮನದಿಂದ. ಈ ಮೇಷ್ಟ್ರು ಮೂಲತಃ ಇದೇ ಊರಿನವರೆ. ಅವರಿಗೆ ಸೇರಿದ ಅರ್ಧ ಎಕರೆ ಪಿತ್ರಾರ್ಜಿತ ಆಸ್ತಿ ಇದೇ ಊರಲ್ಲಿದೆ. ತಮ್ಮ ಸರ್ವೀಸಿನ ಅವಧಿಯಲ್ಲಿ ಅಪರೂಪಕ್ಕೊಮ್ಮೆ ಮುಖ ಕಾಣಿಸಿ ಹೋಗುತ್ತಿದ್ದರು. ಹಲವಾರು ಊರುಗಳನ್ನು ನೋಡಿದ್ದ ಮೇಷ್ಟ್ರು ತಮ್ಮ ಊರು ಏಕೆ ಹೀಗೆ ಎಂದು ಕೇಳಿಕೊಂಡಿದ್ದುಂಟು. ಊರ ಹಿರಿಯರು ಸಿಕ್ಕಾಗ 'ನೋಡಿ ಶಂಕ್ರಣ್ಣಾ! ದೇಶಕ್ಕೆ ದೇಶವೇ ಬದಲಾಗ್ತಿರುವಾಗ ನಮ್ಮ ಹಳ್ಳಿ ಯಾಕೆ ಹೀಗೆ? ಪಂಚಾಯತದ ಸದಸ್ಯರಾಗಿರೋ ನೀವು ಮಾತಾಡಬೇಕು. ಚೇರ್ಮನ್ನರ ಎದ್ರಿಗೆ ಕೋಲೆ ಬಸವನ ಥರಾ ತಲೆಯಾಡಿಸಿದ್ರೆ ಏನ್ ಬಂದ್ಹಂಗಾಯ್ತು?' ಅಂತ ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸಿದ್ದಿತ್ತು. 'ನಮಗ್ಯಾಕೆ ಇಲ್ಲದ ಉಸಾಬರಿ, ಮೇಷ್ಟ್ರೇ! ನಾವು ಊರ ಜನ. ಚೇರ್ಮನ್ರ ವಿರೋಧ ಕಟ್ಕಂಡ್ರೆ ಬದುಕೋದು ಕಷ್ಟ' ಅಂತ ಶಂಕ್ರಪ್ಪ ನಿಟ್ಟುಸಿರು ಬಿಟ್ಟಿದ್ದರು. ಮೇಷ್ಟ್ರು ಇತರ ನಾಲ್ಕಾರು ಸದಸ್ಯರನ್ನು ಮಾತನಾಡಿಸಿ ನೋಡಿದರು. ಒಬ್ಬರದು ಒಂದೊಂದು ಕಥೆ. ಎಲ್ಲರೂ ಚೇರ್ಮನ್ನರಿಂದ ಒಂದಲ್ಲ ಒಂದು ಬಗೆಯಲ್ಲಿ ಉಪಕೃತರೇ!

ಆ ದಿನ ಸಂಜೆ ಮೇಷ್ಟ್ರು ಪಂಚಾಯತದ ಕಚೇರಿಗೆ ಹೋಗಿದ್ದರು. ಆಸನಾರೂಢರಾಗಿದ್ದ ಚೇರ್ಮನ್ ಸಾಹೇಬರು ಪಂಚಾಯತ ಕಾರ್ಯದರ್ಶಿಯೊಂದಿಗೆ ಚರ್ಚೆಯಲ್ಲಿ ನಿರತರಾಗಿದ್ದರು. ಮೇಷ್ಟ್ರನ್ನ ನೋಡಿ 'ಬನ್ನಿ ಮೇಷ್ಟ್ರೇ! ಏನು ಈ ಕಡೆಗೆ?' ಅಂತ ವಿಚಾರಿಸಿದರು. 'ಇಲ್ಲೇ ಇರಬೇಕಂತ ಮಾಡಿದೀರಂತೆ. ಅಲ್ಲ, ಮೇಷ್ಟ್ರೇ! ಈ ಕುಗ್ರಾಮದಲ್ಲಿ ಏನಿದೆ ಅಂತ ಇರ್ತೀರಾ?'